

ಜವೇರಿ ಸೋದರಿಯರಾದ ನಯನಾ, ರಂಜನಾ, ಸುವರ್ಣಾ ಮತ್ತು ದರ್ಶನಾ ಜೊತೆ ಗುರು ಬಿಪಿನ್ ಸಿಂಗ್

ಬಹಳಷ್ಟು ಸೆಳೆಯಿತು. ಒಂದು ನೃತ್ಯರೂಪಕದಲ್ಲಿ, ಅದು ಖಂಡಿತಾ ನಾಯಿಕಾ ಪ್ರಸ್ತುತಿಯೇ ಇರಲಿ, ರಾಧಾಳಿಗೆ ಸಿಟ್ಟು ಬರುವ, ಅಸೂಯೆಯಾಗುವ ಸನ್ನಿವೇಶವೂ ಕರುಣೆ ಮತ್ತು ದುಃಖದ ಭಾವದಲ್ಲಿಯೇ ಪ್ರಕಟವಾಗುವುದು. ಚೂಪುದೃಷ್ಟಿ ಕಡುಕೋಪದ ಅಭಿನಯ ಮಣಿಪುರಿ ನೃತ್ಯದಲ್ಲಿ ಇರುವುದಿಲ್ಲ. ಈ ಅಂಶವೇ ನನಗೆ ಬಹಳ ಇಷ್ಟ. ಅಂದರೆ ರಾಧೆಯು, ನೃತ್ಯ ಪ್ರಸ್ತುತಿಯುದ್ದಕ್ಕೂ ಉತ್ತಮನಾಯಿಕಾ ಭಾವದಲ್ಲಿಯೇ ಇರುತ್ತಾಳೆ. ಖಂಡಿತಾ ನಾಯಿಕಾದ ಸಂದರ್ಭದಲ್ಲಿಯೂ ಅವಳ ಕಣ್ಣ ಹನಿಗಳೇ ಪ್ರಧಾನವಾಗಿ ಬರುತ್ತವೆ. ಸಹಜಾಭಿನಯ, ಗೌರಭಾವಕ್ಕೇ ಹೆಚ್ಚು ಪ್ರಾಧಾನ್ಯ. ಅಂತಿಮವಾಗಿ ಗೌಡಿಯಾ ವೈಷ್ಣವ ಪಂಥವು, ಪರಮಾತ್ಮನನ್ನು ಅಗಲಿದ ಜೀವಾತ್ಮವು ಅವನನ್ನು ಮತ್ತೆ ಸೇರುವುದಕ್ಕೆ ತವಕಿಸುವ ನಂಬಿಕೆಯನ್ನು ಅಧರಿಸಿದೆ. ಚೈತನ್ಯ ಮಹಾಸ್ವಾಮಿಗಳ ಪಂಥವೂ ಇದೇ ನಂಬಿಕೆಯನ್ನು ಮುಂದುವರೆಸುತ್ತದೆ. ಕೃಷ್ಣನಿಂದ ಬೇರೆಯಾದ ರಾಧೆಯು ಆತನನ್ನು ಮರಳಿಪಡೆಯಲು ಹವಣಿಸುವ ದೃಶ್ಯಗಳು ಭಕ್ತನ ಪಾಲಿಗೆ ದೇವರನ್ನು ಅರಸುವ ಆತ್ಮದ ಹುಡುಕಾಟವಾಗಿರುತ್ತದೆ. ಈ ಅಗಲಿಕೆಯ ನೋವು ವ್ಯಕ್ತಿಯ ಆತ್ಮವನ್ನು ಪರಿಶುದ್ಧಗೊಳಿಸುವ ಸುಡುಬೆಂಕಿಯಂತಿರುತ್ತದೆ. ಈ ಬೆಂಕಿಯಲ್ಲಿ ವ್ಯಕ್ತಿಯ ಎಲ್ಲ ಅಹಂ ಭಸ್ಮವಾಗಿ ಪರಿಶುದ್ಧ ಪ್ರಜ್ಞೆಯು ದೇವರಲ್ಲಿ ಲೀನವಾಗಿರಲು ಸಿದ್ಧವಾಗುತ್ತದೆ.

ಕೃಷ್ಣನ ಎಲ್ಲ ಲೀಲೆಗಳ ಉದ್ದೇಶವೂ ಭಕ್ತನ ಆತ್ಮವನ್ನು ಪರಿಶುದ್ಧಗೊಳಿಸುವುದು ಅಥವಾ ಪರಿಶುದ್ಧವಾಗುವ ಹಾದಿಯತ್ತ ಆತ್ಮವನ್ನು ಮುನ್ನಡೆಸಿಕೊಂಡು ಹೋಗುವುದಾಗಿದೆ ಎಂದು ನಾನು ನಂಬಿರುವೆ. ಈ ನಂಬಿಕೆಯನ್ನು ಆಧರಿಸಿಕೊಂಡು ಇಷ್ಟು ಕಾಲ ನೃತ್ಯಕ್ಷೇತ್ರದಲ್ಲಿ ಮುಂದುವರೆದಿರುವೆ. ಭಾಗವತವೂ ಇದೇ ಅಂಶವನ್ನು ಹೇಳುತ್ತದೆ. ಉದಾಹರಣೆಗೆ: ಮಹಾ ರಾಸ್‌ಲೀಲಾ ನಡೆಯುವಾಗ ಕೃಷ್ಣ-ರಾಧೆ ಮತ್ತು ಗೋಪಿಕೆಯರು ನೃತ್ಯದಲ್ಲಿ ತಲ್ಲೀನರಾಗಿರುತ್ತಾರೆ. ತನ್ನ ಬಳಿಗೆ ಕೃಷ್ಣನು ಬಂದಾಗ ಗೋಪಿಯ ಹೃದಯದಲ್ಲಿ 'ನನ್ನ ಬಳಿ ದೇವ ಬಂದಿದ್ದಾನೆ' ಎಂಬ ಅಹಂ ಅಥವಾ ಹೆಮ್ಮೆ ಮೂಡಿದ ಕೂಡಲೇ ಅವನು ಅಲ್ಲಿಂದ ಮಾಯವಾಗಿಬಿಡುತ್ತಾನೆ. ಸಾಧ್ಯವಾದಷ್ಟು ಮಟ್ಟಿಗೆ ಅಹಂಭಾವವನ್ನು ನಾಶ ಮಾಡುವುದೇ ಅವನ ಲೀಲೆಯ ಉದ್ದೇಶ ಎಂಬ ನಂಬಿಕೆಯಿದೆ. ಹೀಗೆ 'ಗೋಪೀ ವಿರಹ' ಮತ್ತೆ ಮತ್ತೆ ನನ್ನನ್ನು ಕಾಡುತ್ತದೆ. ಯಾವುದು ನಮ್ಮ ಬಳಿಯಿಲ್ಲವೋ, ಮನಸ್ಸು ಅದರ ಕುರಿತೇ ಯೋಚಿಸುತ್ತಿರುತ್ತದೆ. ವಿರಹದ ಬೆಂಕಿಯ ಅರ್ಥವು ಹೀಗೆ ಬಹಳ ವ್ಯಾಪಕವಾದುದು. ಅಹಂ